ಆಂಗ್ಲಮಾಧ್ಯಮ ಶಾಲೆಗಳು ಬಹಳ ಶಿಸ್ತು ಎಂದು ಪ್ರಚಲಿತವಾಗಿದ್ದ ಕಾಲವದು. ಅದಕ್ಕೆ ಪೂರಕವಾಗಿ ಆ ಮಕ್ಕಳು ಇಸ್ತ್ರಿ ಮಾಡಿದ ಸಮವಸ್ತ್ರ, ಬೂಟು, ಟೈ, ಬೆಲ್ಟ್ ಎಲ್ಲ ಹಾಕಿಕೊಂಡು ಸರಳ ಸಮವಸ್ತ್ರ ಹಾಗೂ ಚಪ್ಪಲಿಗಾಲಲ್ಲಿರುತ್ತಿದ್ದ ನಮ್ಮ ಮುಂದೆ ಬಂದಾಗ ಅವರನ್ನು ನೋಡಿ ಕುರುಬುತ್ತಿದ್ದ ಒಂದಿಬ್ಬರು ಸಹಪಾಠಿಗಳಿಗೆ 'ಅಯ್ಯೋ! ಏನಿದ್ರೆ ಏನ್ರೇ? ಆ ಶಾಲೇಲಿ ಮಳೇಲಿ ಆಡೋಕ್ಕೆ ಬಿಡೋಲ್ಲ. ಅದರ ಮೇಲೆ ಬರೋ ಮಳೆಗೂ ನೀನು ಬರಬೇಡ, ಅದ್ಯಾರೋ ಜಾನಿ ಅಂತೆ ಅವನು ಆಟ ಆಡ್ಬೇಕು ಅಂತ ಹೇಳ್ತಾ ಇರ್ತಾರೆ. ಪಾಪ! ಮಳೇಲಿ ನೆನೆದು ಆಡೋ ಮಜಾನೆ ಇವರಿಗೆ ಗೊತ್ತಿಲ್ಲ' ಎಂದು ಹೇಳಿದರೆ ಸ್ನೇಹಿತರು ನನ್ನ ತರ್ಕಕ್ಕೆ ತಲೆದೂಗಿ ಕಾನ್ವೆಂಟ್ ಮಕ್ಕಳ ಮೇಲೆ ಸಹಾನುಭೂತಿ ತೋರುತ್ತಿದ್ದರು! ನಂತರ ಕಾನ್ವೆಂಟ್ ಮಕ್ಕಳ ಸ್ಥಿತಿಗೆ ಮರುಗಿ, ಇದರಲ್ಲಿ ಅವರ ತಪ್ಪೇನೂ ಇಲ್ಲವೆಂದೂ, ಇದಕ್ಕೆಲ್ಲಾ ಕಾರಣ ಅಲ್ಲಿಗೆ ಸೇರಿಸಿದ ಅವರ ಪೋಷಕರೆಂದೂ, ನಮ್ಮ ಓರಿಗೆಯ ಮಕ್ಕಳಾದ ಅವರನ್ನು ಆಗಾಗ ಆಟಕ್ಕೆ ಸೇರಿಸಿಕೊಳ್ಳಬಹುದೆಂದೂ ಸಭೆಯಲ್ಲಿ ತೀರ್ಮಾನವಾಗುತ್ತಿತ್ತು.

ಈ ನಿರಂತರ ಸಭೆಗಳ ಪರಿಣಾಮವಾಗಿ ಆದ ಇನ್ನೊಂದು ಲಾಭವೆಂದರೆ, ಏಕಸದಸ್ಯಾ ಪೀಠವಾಗಿದ್ದ ನನ್ನ ಮಳೆಹುಚ್ಚಿನ ಕ್ಲಬ್‌ಗೆ ಸಾಕಷ್ಟು ಸದಸ್ಯರು ಸೇರ್ಪಡೆಯಾಗಿದ್ದು. ಶಾಲೆಯಲ್ಲಿ ತರಗತಿ ನಡೆಯುತ್ತಿದ್ದಾಗ ಮಳೆ ಬಂದು ಛಾವಣಿಯಲ್ಲಿ ನೀರು ಸೋರಿದರೆ ಆ ಜಾಗದಲ್ಲಿ ಕುಳಿತಿರುವ ಸಹಪಾಠಿಗಳ ಬಗ್ಗೆ ಅಸೂಯೆ! ಹಿಂದಿನ ಬೆಂಚಿನಲ್ಲಿ ಕುಳಿತರೆ ಸಿಗುತ್ತಿದ್ದ ಹಲವಾರು ಅನುಕೂಲಗಳ ಅರಿವಿದ್ದ ನಮಗೆ, ಮಳೆಗಾಲದಲ್ಲಿ ತೆರೆದ ಬಾಗಿಲಿನಿಂದ ಇರುಚಲು ಹೊಡೆದರೆ ಮಹದಾನಂದ! ದೇವಸ್ಥಾನದ ಪವಿತ್ರ ನೀರಿನ ಪ್ರೋಕ್ಷಣೆಯಷ್ಟೇ ಪುನೀತ ಭಾವ!

ಬೇಸಿಗೆ ಕಳೆದು ಮಳೆಗಾಲಕ್ಕೆ ಸರಿಯಾಗಿ ಶಾಲೆ ಶುರುವಾಗುತ್ತಿದ್ದುದು ನನಗೊಂದು ವರದಾನವಾಗಿತ್ತು. ನಾನು ಒದ್ದೆ ಆದರೂ ಪರವಾಗಿಲ್ಲ ಪುಸ್ತಕ ಒದ್ದೆಯಾಗಬಾರದೆಂಬ ನೆಪವೊಡ್ಡಿ ಚೀಲಕ್ಕೆ ಕೊಡೆರಕ್ಷಣೆ ಕೊಟ್ಟು ಶಾಲೆಯಿಂದ ಒದ್ದೆಯಾಗಿ ಮನೆಗೆ ಬರುತ್ತಿದ್ದ ನನ್ನನ್ನು ಅಮ್ಮ ಒಳಗೊಯ್ದು ತಲೆ ಒರೆಸಿ, ಬಟ್ಟೆ ಬದಲಾಯಿಸಿ ಬರಸೆಳೆದು ಅಪ್ಪಿಕೊಂಡಾಗ ಆ ಪ್ರೀತಿಯ ಸಿಂಚನದಲ್ಲಿ ಮಳೆಯ ಹಂಬಲ ತಾತ್ಕಾಲಿಕವಾಗಿ ಮರೆಯಾಗುತ್ತಿತ್ತು. ಅರಿಸಿನ ಮೆಣಸು ಹಾಕಿದ ಬಿಸಿಹಾಲು ಕೊಟ್ಟು 'ಕಿಟಕಿಯಿಂದಲೇ ಮಳೆ ನೋಡ್ತಾ ಕುಡೀಬೇಕು. ಮತ್ತೆ ಸಜ್ಜದಿಂದ ಬೀಳೋ ನೀರಿನ ಕೆಳಗೆ ನಿಂತು ಒದ್ದೆ ಮಾಡಿಕೊಂಡರೆ ಬಿಸಿಬಿಸಿ ಕಜ್ಜಾಯ ಸಿಗುತ್ತೆ!' ಎಂದು ತಾಕೀತು ಮಾಡಿ, ಅಜ್ಜಿ ತಾತನನ್ನು ನನ್ನ ಕಾವಲಿಗೆ ಕೂರಿಸಿ ಅಮ್ಮ ಒಳನಡೆಯುತ್ತಿದ್ದಳು.

ಕಿಟಕಿಯಲ್ಲಿ ಕುಳಿತು ಮಳೆ ನೋಡುತ್ತಿದ್ದರೆ ಅನತಿದೂರದಲ್ಲಿದ್ದ ಮೋರಿಯ ಮೇಲೆ ಕಣ್ಣು. ಆ ಮೋರಿ ತುಂಬಿ ಹರಿದರೆ ಒಳ್ಳೆ ಮಳೆ ಬಂದಿದೆ ಎಂದು ಈ ಮಳೆತಜ್ಞೆಯ ಲೆಕ್ಕಾಚಾರ! ಹಾಗೆಯೇ ಅದರಲ್ಲಿ ಆಗಾಗ ತೇಲಿ ಬರುತ್ತಿದ್ದ ಪಾದರಕ್ಷೆಗಳನ್ನು ನೋಡಿ ಯಾರದ್ದು ಇರಬಹುದು? ಹೇಗೆ ಕಳಕೊಂಡರು? ಪಾದರಕ್ಷೆ ನೀರಿಗೆ ಸಿಲುಕಿ ಜಾರಿಹೋಗಿರಬೇಕು. ನಮ್ಮ ವಿದ್ಯಾರಣ್ಯಪುರದವರಿಗೆ ಸೇರಿದ್ದೇ ಆದರೆ ನಾಳೆ ಅವರು ಇದೇ ನಾಲ್ಕನೇ ಮೇನ್ ಬೀದೀಲಿ ಹುಡುಕ್ಕೊಂಡು ಹೋದ್ರೆ ವೆಂಕಿ, ಮಂಜುಳ, ಪುಷ್ಪ ಅಥವಾ ವಾಣಿ ಮನೆ ಹತ್ತಿರ ಸಿಕ್ಕಿದರೂ ಸಿಕ್ಕಬಹುದು ಅಲ್ವಾ? ಎನ್ನುವ ಗಹನವಾದ ಯೋಚನೆಗಳು ಬರುತ್ತಿದ್ದವು. ಅಷ್ಟರಲ್ಲಿ ಕಾಗದದ ದೋಣಿಗಳು ಕಣ್ಣಿಗೆ ಬಿದ್ದು ನನ್ನ ಯೋಚನೆಗಳಿಗೆ ಕಡಿವಾಣ ಬೀಳುತ್ತಿತ್ತು. ಆ ಕಡೆಯಿಂದ ಬಂದಿದೆ ಅಂದ್ರೆ ದೋಣಿ ತ್ರಿವೇಣಿದೋ, ಭಾಗೀದೋ, ಗಂಗಾಧರಂದೋ ಅಥವಾ ಅನಿತಂದೋ ಎಂದು ಮಳೆನೀರಿನಷ್ಟೇ ರಭಸವಾಗಿ ಆ ಕಡೆ ಮನೆ ಇದ್ದ ನನ್ನ ಸ್ನೇಹಿತರ ಕಡೆ ಮನಸ್ಸು ಓಡುತ್ತಿತ್ತು. ಮಾರನೇ ದಿನ ಮರೆಯದೆ ಅವರನ್ನು ಕೇಳಬೇಕೆಂದು ನಿರ್ಧಾರ ಮಾಡಿದ ಮೇಲೆ ನಾನು ಇನ್ನೂ ದೋಣಿ ಬಿಟ್ಟಿಲ್ಲವೆಂಬುದು

